**ಎಂ.ವಿ.ಸಿ.32/2024, ಪಿ.ಡಬ್ಲ್ಯೂ-1 ಹೆಸರುಃ ಶಿವರಾಜ್ ವಿ ಎಂ**

**ದಿಃ17-12-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಡಿ.ಎಲ್ ವಕೀಲರಿಂದಃ**

ನಾನು ಬಿ.ಎಸ್.ಸಿ ವ್ಯಾಸಂಗ ಮಾಡಿದ್ದೇನೆ. ಅಪಘಾತದ ಸಮಯದಲ್ಲಿ ನಾನು ಉಜಿರೆಯಿಂದ ಹೊಳಲ್ಕೆರೆಗೆ ಬರುತ್ತಿದ್ದೆನು. ನನ್ನ ಮಗ ಉಜಿರೆಯಲ್ಲಿ ಇದ್ದು, ನನ್ನ ಮಗನನ್ನು ನೋಡಲು ಹೋಗಿದ್ದೆನು. ಅಪಘಾತ ದಿಃ 07.07.2023 ರಂದು ಆಗಿರುತ್ತದೆ. ಅಪಘಾತ ಮಧ್ಯಾಹ್ನ 3.15 ಕ್ಕೆ ಚಾರ್ಮುಡಿ ಘಾಟಿನ ಬಳಿ, ಅಣ್ಣಪ್ಪ ಸ್ವಾಮಿ ದೇವಾಲಯದ ಬಳಿ ಆಗಿರುತ್ತದೆ. ನಾನು ಉಜಿರೆಯಿಂದ ಚಿತ್ರದುರ್ಗಕ್ಕೆ ಬರುವ ಕೆ.ಎ-17-ಎಫ್-1901 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಬರುತ್ತಿದ್ದೆನು. ನಾನು ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಬರುತ್ತಿದ್ದಾಗ ಟಿಕೇಟನ್ನು ಪಡೆದಿದ್ದೆನು. ಸದರಿ ಟಿಕೇಟಿನ ಪ್ರತಿ ನನ್ನ ಬಳಿ ಇದ್ದು, ಅದು ಹಾಳಾಗಿದ್ದು, ಅದರ ಜೆರಾಕ್ಸ್ ಪ್ರತಿ ಇದೆ. ನಾನು ದಿಃ 07.07.2023 ರಂದು ಉಜಿರೆಯಿಂದ ಚಿತ್ರದುರ್ಗಕ್ಕೆ ಬರುವ ಕೆ.ಎ-17-ಎಫ್-1901 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಕನಾಗಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಎಲ್ಲೋ ಬಿದ್ದು ಗಾಯ ಮಾಡಿಕೊಂಡು, ಪರಿಹಾರ ಪಡೆಯುವ ಸಲುವಾಗಿ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಸುವಾಗ ಅಪಘಾತ ಆಗಿದೆ ಎಂದು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಸದರಿ ಸ್ಥಳದಲ್ಲಿ ರಸ್ತೆ ರಿಪೇರಿ ಕೆಲಸ ನಡೆಯುತ್ತಿತ್ತು ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದ ಬಸ್ಸಿಗೆ ಎದುರಿನಿಂದ ಬಂದ ಕೆ.ಎ-21-ಎಫ್-0215 ರ ಕೆ.ಎಸ್.ಆರ್.ಟಿ.ಸಿ ಬಸ್ ವೇಗವಾಗಿ ಬಂದು ಡಿಕ್ಕಿಪಡಿಸಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ಬಸ್ಸುಗಳ ನಡುವೆ ಎದುರು ಬದರಾಗಿ ಅಪಘಾತ ಆಗಿರುತ್ತದೆ. ನಾನು ಬಸ್ಸಿನ ಚಾಲಕನ ಪಕ್ಕದಲ್ಲಿ ಇರುವ ಸೀಟಿನಲ್ಲಿ ಕುಳಿತಿದ್ದೆನು. ಹಾಗಾಗಿ, ನನಗೆ ಎದೆಯ ಭಾಗಕ್ಕೆ ಮತ್ತು ಹೊಟ್ಟೆಗೆ ಯಾವುದೇ ಗಾಯ ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೊಟ್ಟೆಯ ಭಾಗಕ್ಕೆ ಹಾಗೂ ಲಿವರ್ ಮತ್ತು ಕೆನ್ನೆಯ ಭಾಗಕ್ಕೆ ಪೆಟ್ಟಾಗಿತ್ತು. ಅಪಘಾತದಲ್ಲಿ ನನಗೆ ಯಾವುದೇ ಗಾಯಗಳು ಏರ್ಪಡದಿದ್ದಾಗ್ಯೂ, ನಿಪಿ-9 ರಿಂದ 19 ರವರೆಗಿನ ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಬಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತದ ನಂತರ ನನಗೆ ಪ್ರಜ್ಞೆ ತಪ್ಪಿದ್ದು, ಪ್ರಜ್ಞೆ ಬಂದಾಗ ಉಜಿರೆಯ ಬೆನಕ ಆಸ್ಪತ್ರೆಯಲ್ಲಿದ್ದೆನು. ಅಪಘಾತದ ಕುರಿತು ವೈದ್ಯರಿಗೆ ಮಾಹಿತಿಯನ್ನು ನೀಡಿಲ್ಲ. ಅಪಘಾತದ ನಂತರದಲ್ಲೂ ಸಹ ನಾನು ವೈದ್ಯರಿಗೆ ಮಾಹಿತಿಯನ್ನು ನೀಡಿಲ್ಲ. ಉಜಿರೆಯ ಬೆನಕ

ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿ, ನಂತರ ಎಸ್.ಡಿ.ಎಂ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ಒಂದು ದಿನ ನಾನು ಎಸ್.ಡಿ.ಎಂ ನಲ್ಲಿ ಇದ್ದು, ಪುನಃ ಬೆನಕ ಆಸ್ಪತ್ರೆಗೆ ಬಂದು, ನಂತರ ಮಣಿಪಾಲ್ ನ ಕಸ್ತೂರ ಬಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಾಗಿರುತ್ತೇನೆ. ಮಣಿಪಾಲ್ ಆಸ್ಪತ್ರೆಯಲ್ಲಿ ನನಗೆ ಒಳ್ಳೆಯ ಗುಣಮಟ್ಟದ ಚಿಕಿತ್ಸೆ ನೀಡಿದ್ದು, ಗುಣಮುಖನಾಗಿರುತ್ತೇನೆ ಎಂದರೆ ಸರಿ. ಮಣಿಪಾಲ್ ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ವ್ಯವಸಾಯದಿಂದ ವಾರ್ಷಿಕ ರೂಪಾಯಿ 5-6 ಲಕ್ಷ ಆದಾಯ ಪಡೆಯುತ್ತಿದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಅಪಘಾತದ ಸಮಯದಲ್ಲಿ ಕೆ.ಎ-17-ಎಫ್-1901 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಕನಾಗಿ ಚಾಲನೆ ಮಾಡದಿದ್ದಾಗ್ಯೂ, ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ